

ಅದು ಸರಸರನೆ ಹೋಗುತ್ತಲೇ ಇತ್ತು. ಧೈರ್ಯವಿರದಿದ್ದರೂ ಬಸಪ್ಪ ಅದನ್ನು ಹಿಂಬಾಲಿಸುತ್ತಲೇ ಇದ್ದ. ಕೊನೆಗೆ ಆ ಹಾವು ಅಲ್ಲೇ ಇದ್ದ ಹುತ್ತದೊಳಕ್ಕೆ ನುಸುಳುತ್ತಿತ್ತು. ಬಸಪ್ಪ ಇನ್ನು ಸುಮ್ಮನಿರುವುದು ಬೇಡವೆಂದುಕೊಂಡು, ಧೈರ್ಯ ತಂದುಕೊಂಡು ಹಾವನ್ನು ಹಿಡಿಯಲು ಕೈ ಚಾಚಿದ. ಅದು ಇವನ ಕೈಗೆ ಸಿಗದೆ ಸರ್ರನೆ ಹುತ್ತದೊಳಕ್ಕೆ ಹೊರಟುಹೋಯಿತು. ಅದರ ಬಾಲದ ತುದಿ ಮಾತ್ರ ಇವನಿಗೆ ಸಿಕ್ಕಿತು. ಬಿಡದೆ ಗಟ್ಟಿಯಾಗಿ ಹಿಡಿದುಕೊಂಡ. ಏನಾಶ್ಚರ್ಯ!

ಇವನು ಮುಟ್ಟಿದ ಹಾವಿನ ಬಾಲದ ತುದಿ ಮಾತ್ರ ಬಂಗಾರವಾಯ್ತು. ತುದಿಭಾಗವಾದ್ದರಿಂದ ಚೂರೇ ಚೂರು ಚಿನ್ನ ಸಿಕ್ಕಿತು, ಇಡೀ ಹಾವನ್ನು ಧೈರ್ಯಮಾಡಿ ಹಿಡಿದಿದ್ದರೆ ತುಂಬಾ ಚಿನ್ನ ಸಿಗುತ್ತಿತ್ತು. ತನ್ನ ಬಡತನ ತೊಲಗಿ ತಾನು ಶ್ರೀಮಂತನಾಗಬಹುದಿತ್ತು. ಛೇ, ಒಳ್ಳೆಯ ಅವಕಾಶ ಕೈತಪ್ಪಿ ಹೋಯಿತು ಎಂದು ಹಳಹಳಿಸಿದ.

ಮೂರೂ ಅವಕಾಶಗಳನ್ನು ಅನ್ಯಾಯವಾಗಿ ಕಳೆದುಕೊಂಡುಬಿಟ್ಟೆ ಎಂದು ಪೇಚಾಡಿಕೊಳ್ಳುತ್ತಾ ಮನೆಗೆ ಬಂದ. ಸಿಕ್ಕ ಆ ಚೂರು ಚಿನ್ನದಿಂದ ತನ್ನ ಬಡತನ ನಿವಾರಣೆ ಆಗುವುದಿಲ್ಲ ಎಂದವನಿಗೆ ಗೊತ್ತಿತ್ತು. ದೇವರ ಸಂಕಲ್ಪ ಬೇರೆಯೇ ಇದೆ ಎಂದವನಿಗೆ ಅರ್ಥವಾಯಿತು. ಮಾರನೇದಿನ ಅವನು ಆ ಸನ್ಯಾಸಿ ಬಳಿ ಬಂದು ನಡೆದುದೆಲ್ಲವನ್ನೂ ಹೇಳಿ, ಅವರೆದುರು ಸಿಕ್ಕ ಆ ಚಿನ್ನದ ಚೂರು ಇಟ್ಟು, 'ಸ್ವಾಮಿ, ನನಗಿದು ಬೇಡ. ಬಡವ ನಾನು, ದುರಾಸೆಗೆ ಬಿದ್ದೆ. ಅದಕ್ಕೇ ದೇವರು ನನಗೆ ಯಾವುದೂ ದಕ್ಕದಂತೆ ಮಾಡಿದ. ಸುಲಭವಾಗಿ ಯಾವುದೂ ಸಿಗದು. ಹಾಗೆ ಸಿಕ್ಕರೂ ದಕ್ಕಿಸಿಕೊಳ್ಳಲಾಗದು. ದೇವರು ನನಗೆ ದುಡಿಯಲು ಕೈಕಾಲು, ದೇಹದಲ್ಲಿ ಶಕ್ತಿ ಕೊಟ್ಟಿದ್ದಾನೆ. ಮೈಮುರಿದು ದುಡಿದು ನನ್ನ ಕುಟುಂಬವನ್ನು ಸಲಹುತ್ತೇನೆ. ಬಡತನಕ್ಕೆ ದುಡಿಮೆಯೊಂದೇ ಆಧಾರ, ಅದನ್ನೇ ಗಟ್ಟಿಯಾಗಿ ಹಿಡಿದುಕೊಳ್ಳುತ್ತೇನೆ.' ಎನ್ನುತ್ತಾ ಸಮಾಧಾನಚಿತ್ತದಿಂದ ಹೊರಟುಹೋದ.